ಬಾಗೇಪಲ್ಲಿ ತಾಲ್ಲೂಕಿನಲ್ಲಿ ಮೀನುಗಾರರ ಕುಟುಂಬಗಳಿಗೆ ಮನೆ ಹಂಚಿಕೆ

2304 (2928) : ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2001–02ನೇ ಸಾಲಿನಲ್ಲಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಬಡ ಮೀನುಗಾರರ ಕುಟುಂಬ ವರ್ಗದ ಫಲಾನುಭವಿಗಳು ಮನೆಗಳಿಗಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಇಷ್ಟು;

ಆ) ಎಷ್ಟು ಫಲಾನುಭವಿಗಳಿಗೆ ಮನೆ ಹಂಚಿಕೆಗಾಗಿ ಸರ್ಕಾರದಿಂದ ಅನುಮೋದನೆ ದೊರೆತಿದೆ; ವಿವರ ನೀಡುವುದು;

ಇ) ಮನೆ ನಿರ್ಮಾಣ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ವಸಂತ ವಿ.ಸಾಲಿಯಾನ್ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು): ಅ) 2001–2002ನೇ ಸಾಲಿನಲ್ಲಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ 15 ಮೀನುಗಾರರು ಮನೆಗಳಿಗೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಆ) 2001–2002ನೇ ಸಾಲಿಗೆ ಬಾಗೇಪಲ್ಲಿ ಕ್ಷೇತ್ರದ ವಿವಿಧ ಗ್ರಾಮಗಳಿಗೆ 15 ಮನೆಗಳನ್ನು ಸರ್ಕಾರದಿಂದ ಮಂಜೂರು ಮಾಡಲಾಗಿದೆ. ಈ ಸಂಬಂಧ 15 ಫಲಾನುಭವಿಗಳನ್ನು ಅನುಮೋದಿಸಲಾಗಿದೆ. ಫಲಾನುಭವಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಈ ಮನೆಗಳ ನಿರ್ಮಾಣಕ್ಕಾಗಿ ಹುಡ್ಕೋ ಸಂಸ್ಥೆಯಿಂದ ಸಾಲ ಪಡೆಯಲು ಸರ್ಕಾರವು ಖಾತರಿ ನೀಡಿರುತ್ತದೆ. ಹುಡ್ಕೋ ಸಂಸ್ಥೆಯೊಂದಿಗೆ ಕರಾರು ಮಾಡಿಕೊಳ್ಳುವ ಕ್ರಮವನ್ನು ಅಂತಿಮಗೊಳಿಸಲಾಗುತ್ತಿದೆ.

ಅನುಬಂಧ

2001–02ನೇ ಸಾಲಿಗೆ ಬಾಗೇಪಲ್ಲಿ ತಾಲ್ಲೂಕಿಗೆ ಸರ್ಕಾರದಿಂದ ಅನುಮೋದನೆಯಾದ 15 ಮನೆಗಳ ಸಂಬಂಧ ಅನುಮೋದನೆ ಮಾಡಿದ ಫಲಾನುಭವಿಗಳ ಪಟ್ಟಿ

ಕ್ರಮ ಸಂ.	ಫಲಾನುಭವಿಗಳ ಹೆಸರು ಶ್ರೀ/ಶ್ರೀಮತಿ	ಗಂಡ/ಹೆಂಡತಿ ಶ್ರೀ/ಶ್ರೀಮತಿ	ಗ್ರಾಮ
1	2	3	4
1	ಮಮತಮ್ಮ	ಗಂಗಿರೆಡ್ಡಿ	ಕುರಪಲ್ಲಿ
2	ಲಕ್ಷ್ಮೀನರಸಿಂಹಪ್ಪ	ಆದಿಲಕ್ಷ್ಮಮ್ಮ	ಸಂಗಟಪಲ್ಲಿ
3	ಕೃಷ್ಣಪ್ಪ	ಶಂಕರಮ್ಮ	ಹೋವಾರ್ಲಹಳ್ಳಿ
4	ಶಿವಮ್ಮ	ಲೇ. ಶಿವಾರಡ್ಡಿ	ಸಜ್ಜುಪಲ್ಲಿ
5	ಅಮಾನುಲ್ಲಾ	---	ನಾರೇಮುದ್ದೇವಲ್ಲಿ
6	ವಿ. ವೆಂಕಟಶಿವಪ್ಪ	ಭಾಗ್ಯಲಕ್ಷ್ಮಿ	ಪಸಲಪರ್ತಿ
7	ನರಸಮ್ಮ	ರಾಮಚಂದ್ರಪ್ಪ	ಕಾಶಾಪುರ
8	ವಂಕಟಾಚಲಪತಿ	ವಿಜಯಮ್ಮ	ಗೊಲ್ಲಬೈರೇಪಲ್ಲಿ
9	ಆದಿನಾರಾಯಣಪ್ಪ	ಸುನಂದಮ್ಮ	ಯಲ್ಲಂಪಲ್ಲಿ
10	ವರಲಕ್ಷ್ಮಮ್ಮ	ಚಲಪತಿ	ಉಪ್ಪಾರಹಳ್ಳಿ (ಬಂಡಕೇಟಪಲ್ಲಿ)

1	2	3	4
11	ಈಶ್ವರಮ್ಮ	ಲಕ್ಷ್ಮಣ್ಣ	ಹೊನ್ನಂಪಲ್ಲಿ
12	ಹೆಚ್.ವಿ. ವೆಂಕಟಸ್ವಾಮಿ	ಅಶ್ವಥಮ್ಮ	ಹೊಸಹುಡ್ಯ
13	ಹೆಚ್. ನಾಗರಾಜು	ರಾಜಮ್ಮ	ಕೊಂಡವಾರಿಪಲ್ಲಿ
14	ಸಾಕಲ ಗಂಗಮ್ಮ	ಮಲ್ಲಪ್ಪ	ಗೊಂದಿಪಲ್ಲಿ
15	ವಿ. ಮಂಜುಳ	ಕೆ. ಶ್ರೀನಿವಾಸಲು	ರಾಮಸ್ವಾಮಿಪಲ್ಲಿ

ಬೇಲಿಕೇರಿ ಬಂದರು ಅಭಿವೃದ್ಧಿ

2316 (2799) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೇಲಿಕೇರಿ ಬಂದರು ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಯೋಜನೆಗಳೇನು?

ಆ) ಈ ಯೋಜನೆಗೆ ಅನುಮತಿ ನೀಡಲು ಮತ್ತು ಕಾಮಗಾರಿ ಆರಂಭಿಸಲು ವಿಳಂಬವಾಗುತ್ತಿರಲು ಕಾರಣಗಳೇನು

ಇ) ಪ್ರಸ್ತಾವಿತ ಯೋಜನೆಯ ವಿಳಂಬದಿಂದ ಮೀನುಗಾರರಿಗೆ ಅಪಾರ ತೊಂದರೆ, ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು): ಅ) ಬೇಲಿಕೇರಿ ಮೀನುಗಾರಿಕೆ ಇಳಿದಾಣವನ್ನು ರೂ. 67.40 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಭಾರತ ಸರ್ಕಾರವು ಹಾಗೂ ಕರ್ನಾಟಕ ಸರ್ಕಾರವು ಅನುಕ್ರಮವಾಗಿ ಆಗಸ್ಟ್ 1997 ಮತ್ತು ಮೇ 1998 ರಲ್ಲಿ ಮಂಜೂರಾತಿ ನೀಡಿರುತ್ತವೆ. ಈ ಯೋಜನೆಯಲ್ಲಿ 30 ಮೀ. ಜಟ್ಟಿ, 186 ಮೀ. ಉದ್ದದ ಗ್ರೆಯಾನ್ ಮತ್ತು ಹೊಳೆತ್ತುವಿಕೆ ಒಳಗೊಂಡಿವೆ. ಸದರಿ ಯೋಜನೆಯ ಮೂಲ ವಿನ್ಯಾಸವನ್ನು ಸ್ಥಳೀಯ ಅಗತ್ಯತೆಗಳಿಗೆ ನುಗುಣವಾಗಿ ಬದಲಾವಣೆ ಮಾಡಿ ರೂ. 141.00 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಯನ್ನು ಫೆಬ್ರವರಿ 2001ರಲ್ಲಿ ಭಾರತ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ. ಈ ಯೋಜನೆಯಲ್ಲಿ 52 ಮೀ. ಉದ್ದದ ಜಟ್ಟಿ, ಹೊಳೆತ್ತುವಿಕೆ, 180 ಮೀ. ಉದ್ದದ ಬ್ರೇವರ್ ಟ್ರೈನಿಂಗ್ ವಾಲ್ ಹಾಗೂ 210 ಮೀ. ಉದ್ದದ ಸಮುದ್ರತೀರದ ಸಂರಕ್ಷಣೆ ಕಾಮಗಾರಿಗಳು ಸೇರಿವೆ.

ಆ) ಭಾರತ ಸರ್ಕಾರದಿಂದ ಪರಿಷ್ಕೃತ ಅಂದಾಜುಪಟ್ಟಿಗೆ ಅನುಮೋದನೆಯನ್ನು ನಿರೀಕ್ಷಿಸುವುದು ಅವಶ್ಯಕವಾಗಿದೆ.

ಇ) ಮೀನುಗಾರರು ಕೆಲವು ತೊಂದರೆಗಳನ್ನು ಅನುಭವಿಸಿದ್ದಾರೆ.

ಈ) ಶೀಘ್ರವಾಗಿ ಅನುಮೋದನೆಯನ್ನು ನೀಡುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ.

ವಿಷಯ: ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನಲ್ಲಿ ಬೆಳೆ ವಿಮೆ

2361 (2700) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ. (ಬೈಲಹೊಂಗಲ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?